**ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹಿರಿಯೂರು.**

ಉಪಸ್ಥಿತರುಃ ಶ್ರೀಮತಿ ತಟ್ಟಂಡ ದಮಯಂತಿ ಸೋಮಯ್ಯ,
ಬಿ.ಎ.,ಎಲ್‌ಎಲ್.ಬಿ.,
ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಹಿರಿಯೂರು.

ದಿನಾಂಕ ಃ 28ನೇ ಜೂನ್ 2019.

**ಸಿ.ಸಿ. ನಂ.58/2016**

**ಪಿರ್ಯಾದುದಾರರು** ಃ **ಕರ್ನಾಟಕ ಸರ್ಕಾರ,**
ಹಿರಿಯೂರು ಗ್ರಾಮಾಂತರ ಪೋಲೀಸ್ ಠಾಣೆ
[ಪ್ರತಿನಿಧಿಸುವವರು ಸ. ಸರ್ಕಾರಿ ಅಭಿಯೋಜಕರು]

**ವಿರುದ್ಧ**

**ಆರೋಪಿತರು** ಃ **1.ಅಬುಬಕರ್ ತಂದೆ ಕಲೀಲ್ ಸಾಬ್,**
ಸುಮಾರು 35 ವರ್ಷ, ಆದಿವಾಲ ಫಾರಂ,
ಹಿರಿಯೂರು ತಾಲ್ಲೂಕು .
ವಾಸ–ಆದಿವಾಲ ಫಾರಂ,
ಹಿರಿಯೂರು ತಾಲ್ಲೂಕು.

**2.ಮುಬಾರಕ್ ತಂದೆ ಇಸಾಫ್ ಸಾಬ್**
ಸುಮಾರು 20 ವರ್ಷ,
ಆದಿವಾಲ ಗ್ರಾಮ,
ಹಿರಿಯೂರು ತಾಲ್ಲೂಕು.

**3. ಶರೀಫ್ ತಂದೆ ದಿನಿಸಾಬ್,**
ಸುಮಾರು 26 ವರ್ಷ,
ಆದಿವಾಲ ಗ್ರಾಮ,
ಹಿರಿಯೂರು ತಾಲ್ಲೂಕು.

**4. ಮಹಮದ್ ಅಲಿ ತಂದೆ ಬಲೀಲ್ ಸಾಬ್,**
ಸುಮಾರು 36 ವರ್ಷ ,
ಆದಿವಾಲ ಗ್ರಾಮ ,
ಹಿರಿಯೂರು ತಾಲ್ಲೂಕು .

[ಪ್ರತಿನಿಧಿಸುವವರು ಶ್ರೀ.ಬಿ.ಎಲ್.ಸತೀಶ್‌ಬಾಬು ವಕೀಲರು]

| | | |
|---|---|---|
| 1. ಅಪರಾದ ನಡೆದ ದಿನಾಂಕ | ಃ | 04.05.2015 |
| 2. ಪಿರ್ಯಾದು ನೀಡಿದ ದಿನಾಂಕ | ಃ | 05.05.2015 |
| 3. ಆಪಾದಿತರನ್ನು ಬಂಧಿಸಿದ ದಿನಾಂಕ | ಃ | 27.06.2016 ರಂದು ಆರೋಪಿತರು ತಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ ಈ ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡಿದ್ದಾರೆ. |
| 4. ಪಿರ್ಯಾದುದಾರರ ಹೆಸರು | ಃ | ಶ್ರೀ ಹೆಚ್. ಅಜ್ಮತುಲ್ಲಾ |
| 5. ಸಾಕ್ಷಿ ವಿಚಾರಣೆ ಪ್ರಾರಂಭಿಸಿದ ದಿನಾಂಕ | ಃ | 28.11.2017 |
| 6. ಸಾಕ್ಷಿ ವಿಚಾರಣೆ ಮುಕ್ತಾಯದ ದಿನಾಂಕ | ಃ | 29.01.2019 |
| 7. ಆಪಾದಿತನ ವಿರುದ್ಧ ಇರುವ ಅಪರಾದ | ಃ | ಭಾ.ದಂ.ಸಂ.ಕಲಂ.323, 326, 504, 506 ಸಹವಾಚಕ 34 |
| 8. ನ್ಯಾಯಾಲಯದ ತೀರ್ಪು | ಃ | ಅಂತಿಮ ಆದೇಶದಂತೆ. |

[ಶ್ರೀಮತಿ.ತಟ್ಟಂಡ ದಮಯಂತಿ ಸೋಮಯ್ಯ]
ಹಿರಿಯ ಶ್ರೇಣೀಯ ಸಿವಿಲ್ ನ್ಯಾಯಾಧೀಶರು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಹಿರಿಯೂರು.

## ತೀ ರ್ಪು

ಹಿರಿಯೂರಿನ ಗ್ರಾಮಾಂತರ ಪೊಲೀಸ್ ಠಾಣಾ ಉಪನಿರೀಕ್ಷಕರು 1 ರಿಂದ 4 ನೇ ಆರೋಪಿತರ ವಿರುದ್ದ ಭಾರತೀಯ ದಂಡ ಸಂಹಿತೆ ಕಲಂ 323, 326, 504, ಹಾಗೂ 506 ಸಹವಾಚಕ 34 ರ ಅಪರಾದಗಳಿಗೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದಾರೆ.

2. ದೋಷಾರೋಪಣಾ ಪಟ್ಟಿಯ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇರುತ್ತದೆ.

ದಿನಾಂಕಃ 04.05.2015 ರಂದು ಬೆಳಿಗ್ಗೆ 10.30 ರ ಸಮಯದಲ್ಲಿ ಹಿರಿಯೂರು ತಾಲ್ಲೂಕು ಆದಿವಾಲ ಗ್ರಾಮದಲ್ಲಿ ಚಾಸಾ.1 ರವರು ತಮ್ಮ ಮನೆಯ ಮುಂದೆ ಇದ್ದಾಗ 1 ರಿಂದ 4ನೇ ಆರೋಪಿತರು ಅಪರಾದವೆಸಗುವ ಸಮಾನೋದ್ದೇಶದಿಂದ ಬಂದು ಅವರನ್ನು ಕುರಿತು ನಾವು ನಿನಗೆ ಗಾರೆ ಕೆಲಸಮಾಡುವುದಿಲ್ಲವೆಂದು ಹಳೆಯ ದ್ವೇಷ ದಿಂದ ಅವರಿಗೆ ಸೂಳೆಮಗನೆ ಬೋಳಿಮಗನೆ ಎಂದು ಅವಾಚ್ಯ ಶಬ್ಬಗಳಿಂದ ಬೈದು, 1ನೇ ಆರೋಪಿ ತನ್ನ ಕೈಯಲ್ಲಿದ್ದ ದೊಣ್ಣೆಯಿಂದ ಚಾಸಾ.1 ರವರ ಎಡಕೈಗೆ, ಬೆನ್ನಿಗೆ ಹೊಡೆದು ತೀವ್ರ ಸ್ವರೂಪದ ಗಾಯಪಡಿಸಿ, 2 ರಿಂದ 4 ನೇ ಆರೋಪಿತರು ಚಾಸಾ.1 ರವರಿಗೆ ಕೈ ಗಳಿಂದ ಹೊಡೆದು, ಕಾಲುಗಳಿಂದ ಒದ್ದು ನೋವುಂಟುಪಡಿಸಿ, ಅಲ್ಲಿಂದ ಹೋಗುವಾಗ ನಿನ್ನನ್ನು ಜೀವಂತ ಬಿಡುವುದಿಲ್ಲ, ನಿನ್ನ ಪ್ರಾಣ ತೆಗೆಯುತ್ತೇವೆಂದು ಕೊಲೆ ಬೆದರಿಕೆ ಹಾಕಿರುವುದು ತನಿಖೆಯಿಂದ ಧೃಡಪಟ್ಟಿರುವುದರಿಂದ ಹಿರಿಯೂರು

ಗ್ರಾಮಾಂತರ ಪೊಲೀಸ್ ಠಾಣಾ ಉಪನಿರೀಕ್ಷಕರು ಆರೋಪಿತರ ವಿರುದ್ದ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದಾರೆ.

3. ತನಿಖಾಧಿಕಾರಿಗಳು ತನಿಖಾ ಕಾರ್ಯ ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದು, ಈ ನ್ಯಾಯಾಲಯ ಭಾ ದಂ ಸಂ ಕಲಂ 323, 326, 504, 506 ಸಹವಾಚಕ 34 ರ ಅಪರಾದಗಳಿಗೆ ಸಂಜ್ಞೇಯತೆಯನ್ನು ತೆಗೆದುಕೊಂಡಿದೆ.

4. ದಿಃ 27.06.2016 ರಂದು ಆರೋಪಿತರು ತಮ್ಮ ವಕೀಲರ ಮೂಲಕ ಈ ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಪಡೆದುಕೊಂಡಿದ್ದಾರೆ. ಈ ನ್ಯಾಯಾಲಯ ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರಂತೆ ಆರೋಪಿತರಿಗೆ ದೋಷಾರೋಪಣಾ ಪಟ್ಟಿಯ ನಕಲನ್ನು ಜಾರಿಗೊಳಿಸಿದೆ.

5. ಆರೋಪಿತರ ವಿರುದ್ಧ ದೋಷಾರೋಪಣೆಯನ್ನು ರಚಿಸುವ ಪೂರ್ವದಲ್ಲಿ ಆರೋಪಿತರ ಪರ ವಕೀಲರ ಹಾಗೂ ಸಹಾಯಕ ಸರ್ಕಾರಿ ಅಭಿಯೋಜಕರ ವಾದವನ್ನು ಆಲಿಸಲಾಗಿ ಆರೋಪಿತರ ವಿರುದ್ದ ಮಾಡಿರುವ ಆರೋಪದಿಂದ ಕೈಬಿಡಲು ಯಾವುದೇ ಸಕಾರಣಗಳು ಕಂಡುಬಂದಿಲ್ಲ. ಆದ್ದರಿಂದ ಭಾ ದಂ ಸಂ ಕಲಂ 323, 326, 504, 506 ಸಹವಾಚಕ 34 ರ ಅಪರಾದಗಳಿಗೆ ದೋಷಾರೋಪಣೆಯನ್ನು

ರಚಿಸಿ ಓದಿ ವಿವರಿಸಿ ಹೇಳಿದ್ದು, ಆರೋಪಿತರು ತಾವು ತಪ್ಪು ಮಾಡಿಲ್ಲವೆಂದು, ವಿಚಾರಣೆ ಆಗಬೇಕೆಂದು ಉತ್ತರಿಸಿರುತ್ತಾರೆ.

6. ಅಭಿಯೋಜನಾ ಪಕ್ಷದವರು ಆರೋಪಿತರ ವಿರುದ್ದ ಮಾಡಿರುವ ಆರೋಪಗಳನ್ನು ರುಜುವಾತುಪಡಿಸಲು ತಮ್ಮ ಪರವಾಗಿ ಪ್ರಾಸಾ.1 ರಿಂದ 8 ರವರನ್ನು ವಿಚಾರಣೆಗೊಳಪಡಿಸಿ, ನಿಪಿ 1 ರಿಂದ 7 ರ ದಾಖಲೆಗಳನ್ನು ಹಾಗೂ ಎಂ.ಓ. 1 ನ್ನು ಗುರುತಿಸಿಕೊಂಡಿದ್ದಾರೆ. ಅಭಿಯೋಜನಾ ಪಕ್ಷದ ಪರ ಸಾಕ್ಷಿ ವಿಚಾರಣೆ ಮುಗಿದ ನಂತರ ದಂ ಪ್ರ ಸಂ ಕಲಂ 313 ರ ಅಡಿಯಲ್ಲಿ ಆರೋಪಿತರ ಹೇಳಿಕೆಯನ್ನು ಪಡೆಯಲಾಯಿತು. ಅದರಲ್ಲಿ ಆರೋಪಿತರು ತಮ್ಮ ವಿರುದ್ದ ನುಡಿದಿರುವ ಸಾಕ್ಷ್ಯವನ್ನು ಅಲ್ಲಗಳೆದು ತಮ್ಮ ಪರ ಸಾಕ್ಷಿದಾರರು ಇಲ್ಲವೆಂದು ನುಡಿದಿದ್ದರಿಂದ ಈ ಪ್ರಕರಣವನ್ನು ತೀರ್ಪಿಗಾಗಿ ಮುಂದೂಡಲಾಯಿತು.

7. ಉಭಯ ಪಕ್ಷಗಾರರ ಪರ ಸಹಾಯಕ ಸರಕಾರಿ ಅಭಿಯೋಜಕರ ಹಾಗು ಆರೋಪಿತರ ಪರ ವಕೀಲರ ವಾದವನ್ನು ಆಲಿಸಲಾಯಿತು.

8. ಅಭಿಯೋಜನಾ ಪಕ್ಷದವರು ಆರೋಪಿತರ ವಿರುದ್ದ ಮಾಡಿರುವ ಆರೋಪಗಳ ರೀತ್ಯಾ ನನ್ನ ತೀರ್ಮಾನಕ್ಕೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತದೆ.

1. ದಿನಾಂಕಃ 04.05.2015 ರಂದು ಬೆಳಿಗ್ಗೆ 10.30 ರ ಸಮಯದಲ್ಲಿ ಹಿರಿಯೂರು ತಾಲ್ಲೂಕು ಆದಿವಾಲ ಗ್ರಾಮದಲ್ಲಿ

ಚಾಸಾ.1 ರವರು ತಮ್ಮ ಮನೆಯ ಮುಂದೆ ಇದ್ದಾಗ 1 ರಿಂದ 4ನೇ ಆರೋಪಿತರು ಅಪರಾದವೆಸಗುವ ಸಮಾನೋದ್ದೇಶ ದಿಂದ ಬಂದು ಅವರನ್ನು ಕುರಿತು ನಾವು ನಿನಗೆ ಗಾರೆ ಕೆಲಸ ಮಾಡುವುದಿಲ್ಲವೆಂದು ಹಳೆಯ ದ್ವೇಷದಿಂದ ಅವರಿಗೆ ಸೂಳೆಮಗನೆ ಬೋಳಿಮಗನೆ ಎಂದು ಅವಾಚ್ಯ ಶಬ್ಬಗಳಿಂದ ಬೈದು, ಆ ಮೂಲಕ ಭಾ ದಂ ಸಂ ಕಲಂ 504 ಸಹವಾಚಕ 34 ರಂತೆ ಆರೋಪಿತರು ಅಪರಾದವೆಸಗಿದ್ದಾರೆಂದು ಅಭಿಯೋಜನಾ ಪಕ್ಷದವರು ನಿಸ್ಸಂದೇಹವಾಗಿ ರುಜುವಾತುಪಡಿಸುವರೇ?

2. ಅದೇ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರು ಅಪರಾದವೆಸಗುವ ಸಮಾನೋದ್ದೇಶದಿಂದ ಬಂದು 2 ರಿಂದ 4 ನೇ ಆರೋಪಿತರು ಚಾಸಾ.1 ರವರಿಗೆ ಕೈ ಗಳಿಂದ ಹೊಡೆದು ,ಕಾಲುಗಳಿಂದ ಒದ್ದು ನೋವುಂಟುಪಡಿಸಿ, ಆ ಮೂಲಕ ಭಾ ದಂ ಸಂ ಕಲಂ 323 ಸಹವಾಚಕ 34 ರಂತೆ ಅಪರಾದವೆಸಗಿದ್ದಾರೆಂದು ಅಭಿಯೋಜನಾ ಪಕ್ಷದವರು ನಿಸ್ಸಂದೇಹವಾಗಿ ರುಜುವಾತುಪಡಿಸುವರೇ?

3. ಅದೇ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರು ಅಪರಾದವೆಸಗುವ ಸಮಾನೋದ್ದೇಶದಿಂದ ಬಂದು 1ನೇ ಆರೋಪಿ ತನ್ನ ಕೈಯಲ್ಲಿದ್ದ ದೊಣ್ಣೆಯಿಂದ ಚಾಸಾ.1 ರವರ ಎಡಕೈಗೆ ಬೆನ್ನಿಗೆ ಹೊಡೆದು ತೀವ್ರ ಸ್ವರೂಪದ ಗಾಯಪಡಿಸಿ, ಆ ಮೂಲಕ ಭಾ ದಂ ಸಂ ಕಲಂ 326 ಸಹವಾಚಕ 34

ರಂತೆ ಅಪರಾದವೆಸಗಿದ್ದಾರೆಂದು ಅಭಿಯೋಜನಾ ಪಕ್ಷದವರು ನಿಸ್ಸಂದೇಹವಾಗಿ ರುಜುವಾತುಪಡಿಸುವರೇ?

4. ಅದೇ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರು ಅಪರಾದವೆಸಗುವ ಸಮಾನೋದ್ದೇಶದಿಂದ ಬಂದು 1 ರಿಂದ 4 ನೇ ಆರೋಪಿತರೆಲ್ಲರೂ ಸೇರಿ ಚಾಸಾ.1 ರವರಿಗೆ ಪ್ರಾಣ ಬೆದರಿಕೆ ಹಾಕಿ ಆ ಮೂಲಕ ಭಾ ದಂ ಸಂ ಕಲಂ 506 ಸಹವಾಚಕ 34 ರಂತೆ ಅಪರಾದವೆಸಗಿದ್ದಾರೆಂದು ಅಭಿಯೋಜನಾ ಪಕ್ಷದವರು ನಿಸ್ಸಂದೇಹವಾಗಿ ರುಜುವಾತುಪಡಿಸುವರೇ?

5. ಏನು ಆದೇಶ?

9. ನನ್ನ ತೀರ್ಮಾನಕ್ಕೆ ಉದ್ಭವಿಸಿರುವ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ಉತ್ತರಿಸುತ್ತೇನೆ.

| | | |
|---|---|---|
| ಅಂಶ 1 | ಃ | ನಕಾರಾತ್ಮಕವಾಗಿ |
| ಅಂಶ 2 | ಃ | ನಕಾರಾತ್ಮಕವಾಗಿ |
| ಅಂಶ 3 | ಃ | ನಕಾರಾತ್ಮಕವಾಗಿ |
| ಅಂಶ 4 | ಃ | ನಕಾರಾತ್ಮಕವಾಗಿ |
| ಅಂಶ 5 | ಃ | ಅಂತಿಮ ಅದೇಶದಂತೆ. |

**ಕಾ ರ ಣ ಗ ಳು**

**ಅಂಶ 1 ರಿಂದ 4**ಃ ಈ ಎಲ್ಲಾ ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ಇವೆಲ್ಲವುಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳುತ್ತಿದ್ದೇನೆ.

10. ಈ ಪ್ರಕರಣದಲ್ಲಿ ಆರೋಪಿತರು ಅಪರಾದವೆಸಗುವ ಸಮಾನೋದ್ದೇಶದಿಂದ ಬಂದು ಚಾಸಾ.1 ರವರ ಜೊತೆ ಜಗಳವಾಡಿ, ಅವರಿಗೆ ಅವಾಚ್ಯ ಶಬ್ದಗಳಿಂದ ಬೈದು, 1 ನೇ ಆರೋಪಿ ದೊಣ್ಣೆಯಿಂದ ಅವರಿಗೆ ಹೊಡೆದು ತೀವ್ರ ಸ್ವರೂಪದ ಗಾಯಪಡಿಸಿದ್ದಾರೆನ್ನುವುದನ್ನು 2 ರಿಂದ 4 ನೇ ಆರೋಪಿತರು ಅವರಿಗೆ ಕೈಯಿಂದ ಹೊಡೆದು, ಕಾಲಿನಿಂದ ಒದ್ದು ನೋವುಂಟುಪಡಿಸಿ, ಕೊಲೆ ಬೆದರಿಕೆ ಹಾಕಿದ್ದಾರೆನ್ನುವುದನ್ನು ಸಾಬೀತುಪಡಿಸುವ ಜವಾಬ್ದಾರಿ ಅಭಿಯೋಜನಾ ಪಕ್ಷದವರ ಮೇಲಿದೆ.

11. ಅದಕ್ಕಾಗಿ ಅಭಿಯೋಜನಾ ಪಕ್ಷದವರು ಈ ಪ್ರಕರಣದ ಪ್ರತ್ಯಕ್ಷದರ್ಶಿಯಾದ ಚಾಸಾ.2 ಮತ್ತು 3 ರವರನ್ನು ಪ್ರಾಸಾ.1 ಮತ್ತು 2 ಎಂದು, ಪ್ರಕರಣ ದಾಖಲಿಸಿದ ಚಾಸಾ.7 ರವರನ್ನು ಪ್ರಾಸಾ.3 ಎಂದು, ಸ್ಥಳ ಮಹಜರಿನ ಪಂಚ ಸಾಕ್ಷಿದಾರರಾದ ಚಾಸಾ.4 ಮತ್ತು 5 ರವರನ್ನು ಪ್ರಾಸಾ.4 ಹಾಗೂ 5 ಎಂದು, ಪಿರ್ಯಾದುದಾರರಾದ ಚಾಸಾ.1 ರವರನ್ನು ಪ್ರಾಸಾ.6 ಎಂದು, ವೈದ್ಯಾಧಿಕಾರಿಯಾದ ಚಾಸಾ.6 ರವರನ್ನು ಪ್ರಾಸಾ.8 ಎಂದ, ಹಾಗೂ ಈ ಪ್ರಕರಣದ ತನಿಖಾಧಿಕಾರಿಗಳಾದ ಚಾಸಾ.8 ರವರನ್ನು ಪ್ರಾಸಾ.7 ಎಂದು ವಿಚಾರಣೆಗೊಳಪಡಿಸಿ ಪ್ರಾಸಾ.1 ರವರ ಹೇಳಿಕೆಯನ್ನು ನಿಪಿ.1 ಎಂದು, ಪ್ರಾಸಾ.2 ರವರ ಹೇಳಿಕೆಯನ್ನು ನಿಪಿ.2 ಎಂದು, ಫಿರ್ಯಾದನ್ನು ನಿಪಿ.3 ಎಂದು, ಪ್ರ.ವ.ವರದಿಯನ್ನು ನಿಪಿ.4ಎಂದು , ಸ್ಥಳ ಮಹಜರನ್ನು ನಿಪಿ.5 ಎಂದು,

ಗಾಯದ ಪ್ರಮಾಣಪತ್ರವನ್ನು ನಿಪಿ.6 ಎಂದು ಹಾಗೂ ಕ್ಷ ಕಿರಣ ವನ್ನು ನಿಪಿ.7 ಎಂದು ಗುರುತಿಸಿಕೊಂಡಿದ್ದಾರೆ. ಇದಲ್ಲದೇ ಆರೋಪಿತರು ಹಲ್ಲೆಗೆ ಬಳಸಿದ್ದಾರೆನ್ನಲಾದ ದೊಣ್ಣೆಯನ್ನು ಎಂ.ಒ.1 ಎಂದು ಗುರುತಿಸಿಕೊಂಡಿದ್ದಾರೆ .

12. ಪ್ರಾಸಾ.6 ಅಜ್ಮತುಲ್ಲಾ ಇವರು ಈ ಪ್ರಕರಣದ ಫಿರ್ಯಾದುದಾರಾಗಿದ್ದು, ಇವರು ತಮ್ಮ ವಿಚಾರಣೆಯಲ್ಲಿ 3 ವರ್ಷಗಳ ಹಿಂದೆ ತಮ್ಮ ಮನೆಯ ಗಾರೆ ಕೆಲಸವನ್ನು 1 ಮತ್ತು 2 ನೇ ಆರೋಪಿಗಳಿಗೆ ಗುತ್ತಿಗೆಗೆ ಕೊಟ್ಟಿದ್ದು, ಅವರು 2–3 ತಿಂಗಳು ಸತಾಯಿಸಿ ಕೆಲಸ ಮಾಡಿಕೊಡಲಿಲ್ಲವೆಂದು, ಆದ್ದರಿಂದ ತಾನು ಅವರ ಮನೆಯ ಬಳಿ ಹೋಗಿ ನಾಳೆ ಬರಬೇಕು ಇಲ್ಲವಾದರೆ ದುಡ್ಡು ಕೊಡಬೇಕೆಂದು ಹೇಳಿ ಬಂದಿದ್ದು, ಮರುದಿನ ಬೆಳಗ್ಗೆ 10.30 ರ ಸಮಯದಲ್ಲಿ ಆರೋಪಿತರು ತಮ್ಮ ಮನೆಯ ಹತ್ತಿರ ಬಂದು ತನ್ನನ್ನು ಮನೆಯಿಂದ ಹೊರಗೆ ಎಳೆದು 1 ನೇ ಆರೋಪಿ ದೊಣ್ಣೆಯಿಂದ ತನ್ನ ತಲೆಗೆ ಹೊಡೆಯಲು ಬಂದಾಗ, ತಾನು ಕೈ ಅಡ್ಡ ಹಾಕಿದ್ದರಿಂದ ತನ್ನ ಎಡಗೈಗೆ ಪೆಟ್ಟಾಯಿತೆಂದು, ಉಳಿದವರು ಎಲ್ಲರೂ ಸೇರಿ ತನ್ನನ್ನು ಎಳೆದಾಡಿ ಕಾಲಿನಿಂದ ತುಳಿದಾಡಿ ಹೊಡೆದು, ಸೂಳೆಮಗನೆ ನಿನ್ನನ್ನು ಬಿಡುವುದಿಲ್ಲ ನಿನ್ನ ಪ್ರಾಣ ತೆಗೆಯುತ್ತೇವೆಂದು ಬೆದರಿಕೆ ಹಾಕಿದರೆಂದು, ಆಗ ಚಾಸಾ 2 ರವರು ಬಂದು ಗಲಾಟೆ ಬಿಡಿಸಿದ್ದು, ನಂತರ ತಾನು ಹಿರಿಯೂರು ಸರ್ಕಾರಿ ಆಸ್ಪತ್ರೆಗೆ ಬಂದು ದಾಖಲಾಗಿದ್ದು, ಅಲ್ಲಿ ಎಕ್ಸರೇ ತೆಗೆದು ನೋಡಿದಾಗ ತನ್ನ ಎಡಗೈ ಮೂಳೆ ಮುರಿದಿದೆ ಎಂದು ವೈದ್ಯರು

ತಿಳಿಸಿದರೆಂದು ನಂತರ ತಾನು ನಿಪಿ.3 ರಂತೆ ದೂರು ಕೊಟ್ಟಿರುತ್ತೇನೆಂದು, ಮರುದಿನ ಪೋಲಿಸರು ತನ್ನ ಮನೆಯ ಹತ್ತಿರ ಮಧ್ಯಾಹ್ನ 2 ಗಂಟೆಗೆ ಬಂದು ನಿಪಿ.5 ರಂತೆ ಮಹಜರ್ ಜರುಗಿಸಿ, 1ನೇ ಆರೋಪಿ ಹಲ್ಲೆಗೆ ಬಳಸಿದ ದೊಣ್ಣೆಯನ್ನು ಜಪ್ತಿ ಮಾಡಿದರೆಂದು, ಅದು ಎಂ.ಒ.1 ರ ದೊಣ್ಣೆಯಾಗಿದೆ ಎಂದು ಅದನ್ನು ಗುರುತಿಸಿ ಹಾಗೂ ಆರೋಪಿತರನ್ನು ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ.

13. ಪ್ರಾಸಾ.1 ಸಿದ್ದಣ್ಣ ಇವರು ತಮ್ಮ ವಿಚಾರಣೆಯಲ್ಲಿ ತನಗೆ ಚಾಸಾ.1, 3 ಹಾಗೂ ಆರೋಪಿತರ ಪರಿಚಯ ಇದೆ ಎಂದು, ತಾನು ಯಾವುದೇ ಗಲಾಟೆ ನೋಡಿಲ್ಲವೆಂದು, ಪೋಲಿಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲವೆಂದು, ಈ ಪ್ರಕರಣದ ಬಗ್ಗೆ ತನಗೆ ಏನೂ ಗೊತ್ತಿಲ್ಲವೆಂದು ಸಾಕ್ಷಿ ನುಡಿದಿದ್ದಾರೆ.

14. ಪ್ರಾಸಾ.2 ಶೇಖುಲ್ಲಾ ಇವರು ತಮ್ಮ ವಿಚಾರಣೆಯಲ್ಲಿ ತನಗೆ ಚಾಸಾ.1, 2 ಹಾಗೂ ಆರೋಪಿತರ ಪರಿಚಯ ಇದೆ ಎಂದು, ತಾನು ಯಾವುದೇ ಗಲಾಟೆ ನೋಡಿಲ್ಲವೆಂದು ಪೋಲಿಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲವೆಂದು, ಈ ಪ್ರಕರಣದ ಬಗ್ಗೆ ತನಗೆ ಏನೂ ಗೊತ್ತಿಲ್ಲವೆಂದು ಸಾಕ್ಷಿ ನುಡಿದಿದ್ದಾರೆ.

15. ಪ್ರಾಸಾ.3 ಲಕ್ಷ್ಮೀವೆಂಕಟೇಶ್ ಇವರು ಗ್ರಾಮಾಂತರ ಪೋಲಿಸ್ ಠಾಣೆಯ ಮುಖ್ಯ ಪೇದೆಯಾಗಿದ್ದು ಇವರು ತಮ್ಮ ವಿಚಾರಣೆಯಲ್ಲಿ ತಾನು ದಿಃ 05.05.2015 ರಂದು ಮಧ್ಯಾಹ್ನ 12 ಗಂಟೆ ಸಮಯದಲ್ಲಿ ಠಾಣೆಯಲ್ಲಿದ್ದಾಗ ಚಾಸಾ.1 ರವರು ಹಾಜರಾಗಿ

ನೀಡಿದ ನಿಪಿ.3 ರ ದೂರನ್ನು ಸ್ವೀಕರಿಸಿ ಪ್ರಕರಣವನ್ನು ದಾಖಲಿಸಿ ನಿಪಿ.4 ರ ಪ್ರ ವ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆಂದು, ನಂತರ ಕೃತ್ಯ ನಡೆದ ಸ್ಥಳಕ್ಕೆ ಭೇಟಿಕೊಟ್ಟು ಚಾಸಾ.4 ಮತ್ತು 5 ರವರ ಸಮಕ್ಷಮ ನಿಪಿ.5 ರಂತೆ ಮಹಜರ್ ಜರುಗಿಸಿ, ಎಂ.ಒ.1 ರ ದೊಣ್ಣೆಯನ್ನು ಜಪ್ತಿ ಪಡಿಸಿದ್ದೇನೆಂದು, ದಿಃ 06.05.2015 ರಂದು ಆರೋಪಿತರು ಠಾಣೆಗೆ ಹಾಜರಾದ ಮೇರೆಗೆ ಅವರ ವಿರುದ್ಧ ದಸ್ತಗಿರಿ ಕ್ರಮ ಕೈಗೊಂಡು, ಜಾಮೀನಿನ ಮೇಲೆ ಬಿಡುಗಡೆಗೊಳಿಸಿ ಚಾಸಾ.1 ರವರ ಮರು ಹೇಳಿಕೆಯನ್ನು ದಿಃ 06.05.2015 ರಂದು ಪಡೆದಿರುತ್ತೇನೆಂದು ಸಾಕ್ಷಿ ನುಡಿದಿದ್ದಾರೆ

16. ಪ್ರಾಸಾ.4 ಸರ್ದಾರ್‌ರವರು ತಮ್ಮ ವಿಚಾರಣೆಯಲ್ಲಿ ನಿಪಿ.5 ರಲ್ಲಿರುವ ಸಹಿ ತನ್ನದೆಂದು ಅದನ್ನು ತಾನು ಠಾಣೆಯಲ್ಲಿ ಮಾಡಿದ್ದು, ಅದು ಯಾವ ವಿಚಾರಕ್ಕೆಂದು ತನಗೆ ಗೊತ್ತಿಲವೆಂದು, ತನ್ನ ಸಮಕ್ಷಮ ಮಹಜರ್ ಮಾಡಿಲ್ಲ, ಏನನ್ನೂ ಜಪ್ತಿ ಪಡಿಸಿಲ್ಲವೆಂದು ಸಾಕ್ಷಿ ನುಡಿದಿರುತ್ತಾರೆ .

17. ಪ್ರಾಸಾ.5 ಬರ್ಕಾತ್‌ಅಲಿ ರವರು ತಮ್ಮ ವಿಚಾರಣೆಯಲ್ಲಿ ನಿಪಿ.5 ರಲ್ಲಿರುವ ಸಹಿ ತನ್ನದೆಂದು ಅದನ್ನು ತಾನು ಠಾಣೆಯಲ್ಲಿ ಮಾಡಿದ್ದು, ಅದು ಯಾವ ವಿಚಾರಕ್ಕೆಂದು ತನಗೆ ಗೊತ್ತಿಲ್ಲವೆಂದು, ತನ್ನ ಸಮಕ್ಷಮ ಮಹಜರ್ ಮಾಡಿಲ್ಲ, ಏನನ್ನೂ ಜಪ್ತಿ ಪಡಿಸಿಲ್ಲವೆಂದು ಸಾಕ್ಷಿ ನುಡಿದಿರುತ್ತಾರೆ.

18. ಪ್ರಾಸಾ.8 ಡಾಃ ಗೀತಾರವರು ತಮ್ಮ ವಿಚಾರಣೆಯಲ್ಲಿ ದಿಃ 05.052015 ರಂದು ಮಧ್ಯಾಹ್ನ 3.30 ರ ಸಮಯದಲ್ಲಿ ತಾನು ಹಿರಿಯೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ಕರ್ತವ್ಯದಲ್ಲಿದ್ದಾಗ ಅಜ್ಮತುಲ್ಲಾ ತಂದೆ ದಿವಂಗತ ಹೊನ್ನೂರ್ ಸಾಬ್ ಎನ್ನುವವರು ಹಲ್ಲೆಯ ಹಿನ್ನೆಲೆಯಲ್ಲಿ ಚಿಕಿತ್ಸೆಗೆ ಬಂದಾಗ ತಾನು ಅವರನ್ನು ಪರೀಕ್ಷಿಸಿ ಕ್ಷ ಕಿರಣವನ್ನು ಪರಿಶೀಲಿಸಿದಾಗ ಅವರ ಎಡಗೈನ 1/3 ಅಲ್ನಾ ಮೂಳೆ ಮುರಿದಿರುವುದು ಕಂಡು ಬಂತೆಂದು ಅದು ತೀವ್ರ ಸ್ವರೂಪದ ಗಾಯವಾಗಿದ್ದ ಬಗ್ಗೆ ತಾನು ನಿಪಿ.6 ರಂತೆ ಗಾಯದ ಪ್ರಮಾಣ ಪತ್ರವನ್ನು ನೀಡಿದ್ದೇನೆಂದು, ತಾನು ತಂದ ಕ್ಷ ಕಿರಣವನ್ನು ನಿಪಿ.7 ರಂತೆ ಹಾಜರುಪಡಿಸಿದ್ದೇನೆಂದು, ಒಬ್ಬ ವ್ಯಕ್ತಿಗೆ ದೊಣ್ಣೆಯಿಂದ ಹಲ್ಲೆ ಮಾಡಿದರೆ ಆ ರೀತಿಯ ಗಾಯಗಳಾಗುವ ಸಾಧ್ಯತೆ ಇದೆ ಎಂದು ಸಾಕ್ಷಿ ನುಡಿದಿರುತ್ತಾರೆ.

19. ಪ್ರಾಸಾ.7 ಯು.ಸತೀಶ್ ಕುಮಾರ್ ರವರು ತಮ್ಮ ವಿಚಾರಣೆಯಲ್ಲಿ ದಿಃ20.06.2015 ರಂದು ಚಾಸಾ.1 ರವರ ಗಾಯದ ಪ್ರಮಾಣಪತ್ರವನ್ನು ನಿಪಿ.6 ರಂತೆ ಸ್ವೀಕರಿಸಿ, ತನಿಖೆ ಪೂರ್ಣಗೊಳಿಸಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆಂದು ಸಾಕ್ಷಿ ನುಡಿ ದಿರುತ್ತಾರೆ .

20. ಪ್ರಾಸಾ.6 ರವರು ನೀಡಿದ ನಿಪಿ.3 ರ ದೂರಿನ ಆಧಾರದ ಮೇರೆಗೆ ಪ್ರಸ್ತುತ ಪ್ರಕರಣ ದಾಖಲಾಗಿದೆ. ದಿಃ 04.05.2015 ರಂದು ಬೆಳಿಗ್ಗೆ 10.30 ರ ಸಮಯದಲ್ಲಿ ನಡೆದಿದೆ ಎಂದು ಹೇಳಲಾದ ಗಲಾಟೆಗೆ ಸಂಬಂಧಿಸಿದಂತೆ ದಿಃ 05.05.2015 ರಂದು

ಮಧ್ಯಾಹ್ನ 12 ಗಂಟೆಯ ಸಮಯದಲ್ಲಿ ಪ್ರಾಸಾ.6 ರವರು ನಿಪಿ.3 ರ ದೂರನ್ನು ಸಲ್ಲಿಸಿದ್ದಾರೆನ್ನುವುದು ಅದರಲ್ಲಿರುವ ಹಿಂಬರಹದಿಂದ ತಿಳಿದುಬರುತ್ತದೆ. ಈ ಪ್ರಕರಣದಲ್ಲಿ ಸಾಕ್ಷಿ ನುಡಿದಿರುವ ಸಾಕ್ಷಿದಾರರ ನುಡಿ ಸಾಕ್ಷ್ಯವನ್ನು ಚರ್ಚಿಸುವ ಪೂರ್ವದಲ್ಲಿ ಪ್ರಾಸಾ.6 ರವರು ನೀಡಿದ ನಿಪಿ.3 ರ ದೂರಿನಲ್ಲಿ ನಮೂದಿಸಿರುವ ಅಂಶಗಳನ್ನು ತಿಳಿದುಕೊಳ್ಳುವುದು ಅಗತ್ಯವಾಗಿದೆ.

21. ನಿಪಿ.3 ರ ದೂರಿನಲ್ಲಿ, 1 ಹಾಗೂ 2 ನೇ ಆರೋಪಿತರು 3 ತಿಂಗಳ ಹಿಂದೆ ತಮ್ಮ ಮನೆಯ ಗಾರೆ ಕೆಲಸ ಮಾಡಿಕೊಡಲು ಒಪ್ಪಂದ ಮಾಡಿಕೊಂಡಿದ್ದು, ಆ ಬಗ್ಗೆ ಪೂರ್ತಿ ಹಣ ಪಡೆದು ಕೆಲಸವನ್ನು ಅರ್ಧಕ್ಕೆ ನಿಲ್ಲಿಸಿದ್ದರಿಂದ ತಾನು ಅವರ ಮನೆಗೆ ಹೋಗಿ ಪೂರ್ತಿಯಾಗಿ ಮಾಡಿಕೊಡಬೇಕೆಂದು ಒತ್ತಾಯ ಮಾಡಿ ಬಂದು 04.05.2015 ರಂದು ಬೆಳಿಗ್ಗೆ 10.30 ರ ಸಮಯದಲ್ಲಿ ತಾನು ಮನೆಯಲ್ಲಿದ್ದಾಗ 1 ಮತ್ತು 2 ನೇ ಆರೋಪಿತರು ತನ್ನ ಜೊತೆ 3 ಮತ್ತು 4 ನೇ ಆರೋಪಿತರನ್ನು ಹಾಗೂ 4 ನೇ ಪ್ರತಿವಾದಿಯ ಹೆಂಡತಿ ಉಲ್ಪತ್‌ರವರ ಜೊತೆ ಗುಂಪು ಕಟ್ಟಿಕೊಂಡು ಬಂದು ತನ್ನ ಮನೆಯೊಳಗೆ ನುಗ್ಗಿ ನಿನ್ನ ಯಾವ ಕೆಲಸವನ್ನೂ ಮಾಡುವುದಿಲ್ಲ, ನಿನ್ನನ್ನು ಜೀವಂತ ಬಿಡುವುದಿಲ್ಲವೆಂದು ಬೈಯುತ್ತಾ 1 ನೇ ಆರೋಪಿ ಒಂದು ದೊಣ್ಣೆಯಿಂದ ತನ್ನ ತಲೆಗೆ ಹೊಡೆಯಲು ಬಂದಾಗ ತಾನು ತಪ್ಪಿಸಿಕೊಳ್ಳಲು ತನ್ನ ಎಡಗೈಯನ್ನು ಅಡ್ಡ ಹಿಡಿದಿದ್ದರಿಂದ ತನ್ನ ಎಡಗೈಗೆ ಬಲವಾದ ಪೆಟ್ಟು ಬಿತ್ತೆಂದು, ನಂತರ ಆತ ತನ್ನ ಬೆನ್ನಿಗೆ

ಹಾಗೂ ಕಾಲಿಗೆ ಹೊಡೆದಿದ್ದು , ಉಳಿದವರು ಆತನ ಜೊತೆ ಸೇರಿಕೊಂಡು ಕೈ ಯಿಂದ ಹೊಡೆದು, ಕಾಲಿನಿಂದ ಒದ್ದರೆಂದು, ಹಾಗೂ ತಮ್ಮ ಗ್ರಾಮದ ಶೇಖುಲ್ಲಾ ಹಾಗೂ ಸಿದ್ದಣ್ಣ ಬಂದು ಗಲಾಟೆ ಬಿಡಿಸಿ ತನ್ನನ್ನು ಹಿರಿಯೂರಿನ ಆಸ್ಪತ್ರೆಗೆ ಚಿಕಿತ್ಸೆಗೆ ಕಳುಹಿಸಿದರೆಂದು ಆಗ ನಿನ್ನನ್ನು ಜೀವಂತ ಬಿಡುವುದಿಲ್ಲವೆಂದು ಆರೋಪಿತರು ತನಗೆ ಬೆಧರಿಕೆ ಹಾಕಿದರೆಂದು, ಆಸ್ಪತ್ರೆಯಲ್ಲಿ ವೈಧ್ಯರ ಸಲಹೆಯ ಮೇರೆಗೆ ತನ್ನ ಎಡಗೈ ಎಕ್ಸರೇ ತೆಗೆಸಿ ನೋಡಿದಾಗ ಮೂಳೆ ಮುರಿದಿದೆ ಎಂದು, ಬ್ಯಾಂಡೇಜ್ ಹಾಕಿ ವಿಶ್ರಾಂತಿ ಪಡೆಯಲು ಸೂಚಿಸಿದ್ದಾರೆಂದು, ಆದ್ದರಿಂದ ತನಗೆ ಹಲ್ಲೆ ಮಾಡಿದ ವ್ಯಕ್ತಿಗಳ ವಿರುದ್ದ ಕ್ರಮ ಕೈಗೊಳ್ಳಬೇಕೆಂದು ಆರೋಪಿಸಿ ಪ್ರಾಸಾ.6 ರವರು ನಿಪಿ.3 ರ ದೂರನ್ನು ಸಲ್ಲಿಸಿದ್ದಾರೆ .

22. ಪ್ರಾಸಾ.3 ರಲ್ಲಿ ಬರೆದ ಅಂತಗಳಿಂದ ಘಟನೆ ನಡೆದ ಕೂಡಲೇ ಪ್ರಾಸಾ.6 ರವರು ಹಿರಿಯೂರಿನ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಹೋಗಿದ್ದರೆನ್ನುವುದು ವೈಧ್ಯರ ಸಲಹೆಯ ಮೇರೆಗೆ ಕ್ಷ ಕಿರಣ ತೆಗೆದು ನೋಡಿದಾಗ ಮೂಳೆ ಮುರಿದಿದೆ ಎಂದು ಗೊತ್ತಾಗಿ ಬ್ಯಾಂಡೇಜ್ ಹಾಕಿದ್ದರೆನ್ನುವುದು ತಿಳಿದು ಬರುತ್ತದೆ. ನಿಪಿ.3 ರಲ್ಲಿ ಮಾಡಿದ ಹಿಂಬರಹ ದಿಂದ ಪ್ರಾಸಾ.6 ರವರು ಸ್ವತಃ ಠಾಣೆಗೆ ಹಾಜರಾಗಿ ದಿಃ 05.05.2015 ರಂದು ಮಧ್ಯಾಹ್ನ 12 ಗಂಟೆಗೆ ದೂರು ಸಲ್ಲಿಸಿದ್ದಾರೆನ್ನುವುದು ತಿಳಿದು ಬರುತ್ತದೆ.

23. ಈ ಪ್ರಕರಣದಲ್ಲಿ ಅಭಿಯೋಜನಾ ಪರವಾಗಿ ಗುರುತಿಸಲ್ಪಟ್ಟ ನಿಪಿ.6 ರ ಗಾಯದ ಪ್ರಮಾಣ ಪತ್ರವನ್ನು ಗಮನಿಸಿದಾಗ ಪ್ರಾಸಾ.6 ರವರು ಚಿಕಿತ್ಸೆಗಾಗಿ ದಿಃ 05.05.2015 ರಂದು ಮಧ್ಯಾಹ್ನ 3.30 ರ ಸಮಯದಲ್ಲಿ ಹಿರಿಯೂರಿನ ಸರ್ಕಾರಿ ಆಸ್ಪತ್ರೆಗೆ ಹೋಗಿದ್ದರೆನ್ನುವುದು ತಿಳಿದು ಬರುತ್ತದೆ. ಈ ಪ್ರಕರಣದಲ್ಲಿ ಸಾಕ್ಷಿ ನುಡಿದಿರುವ ವೈಧ್ಯಾಧಿಕಾರಿಗಳಾದ ಪ್ರಾಸಾ.8 ರವರು ತಮ್ಮ ವಿಚಾರಣೆಯಲ್ಲಿ ಪ್ರಾಸಾ.6 ಅಜ್ಮತುಲ್ಲಾ ಚಿಕಿತ್ಸೆಗಾಗಿ 05.05.2015 ರಂದು ಮಧ್ಯಾಹ್ನ 3.30 ರ ಸಮಯದಲ್ಲಿ ಆಸ್ಪತ್ರೆಗೆ ಬಂದಾಗ ಕ್ಷ ಕಿರಣ ತೆಗೆದು ಪರಿಶೀಲಿಸಿದಾಗ ಆತನ ಎಡಗೈನ 1/3 ಅಲ್ನಾ ಮೂಳೆ ಮುರಿದಿರುವುದನ್ನು ತಾನು ಗಮನಿಸಿದ್ದೇನೆಂದು ಅದು ತೀವ್ರ ಸ್ವರೂಪದ ಗಾಯವಾಗಿತ್ತೆಂದು ಸಾಕ್ಷಿ ನುಡಿದಿದ್ದಲ್ಲದೇ ಸ್ವತಃ ವೈಧ್ಯಾಧಿಕಾರಿ ನ್ಯಾಯಾಲಯಕ್ಕೆ ಬರುವಾಗ ಪ್ರಾಸಾ.6 ರವರಿಗೆ ಸಂಬಂಧಿಸಿದ ಒಂದು ಕ್ಷ ಕಿರಣವನ್ನು ತಂದಿದ್ದು, ಅದನ್ನು ನಿಪಿ.7 ಎಂದು ಗುರುತಿಸಲಾಗಿದೆ.

24. ಹಾಗಾದರೆ ಪ್ರಾಸಾ.1 ರವರು ನಿಪಿ.3 ರ ದೂರು ಕೊಡುವ ಸಮಯದಲ್ಲಿ ಅವರು ಹಿರಿಯೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರಲಿಲ್ಲವೆನ್ನುವುದು ಸ್ಪಷ್ಟವಾಗಿ ತಿಳಿದು ಬರುತ್ತದೆ. ಇದಲ್ಲದೇ ಖಾಸಗಿ ಸೆಂಟರ್‌ನಲ್ಲಿ ತೆಗೆದ ಕ್ಷ ಕಿರಣವನ್ನು ತಾನು ನೋಡಿದ್ದೇನೆಂದು ಪ್ರಾಸಾ.8 ರವರು ನಿಪಿ.6 ರ ಗಾಯದ ಪ್ರಮಾಣ ಪತ್ರದಲ್ಲಿ ನಮೂದಿಸಿದ್ದಾರೆ . ಹಾಗಾದರೆ ತನ್ನ ಎಡಗೈನ ಮೂಳೆ ಮುರಿದಿದೆ ಎಂದು ವೈಧ್ಯರು ಕ್ಷ

ಕಿರಣವನ್ನು ಪರೀಕ್ಷಿಸಿ ತನಗೆ ಬ್ಯಾಂಡೇಜ್ ಹಾಕಿದ್ದಾರೆಂದು ಪ್ರಾಸಾ.6 ರವರು ದಿಃ 05.05.2015 ರಂದು ಮಧ್ಯಾಹ್ನ 12 ಗಂಟೆಯ ಸಮಯದಲ್ಲಿ ಫಿರ್ಯಾದಿನಲ್ಲಿ ಹೇಳಿರುವುದು ಸಂಶಯಾಸ್ಪದವಾಗಿ ಕಂಡು ಬರುತ್ತದೆ. ಏಕೆಂದರೆ ಆ ಸಮಯದಲ್ಲಿ ಹಿರಿಯೂರಿನ ಸರ್ಕಾರಿ ವೈಧ್ಯರು ಪ್ರಾಸಾ.6 ರವರನ್ನು ಇನ್ನೂ ಪರೀಕ್ಷಿಸಿಯೇ ಇರಲಿಲ್ಲ. ಹಾಗಾದರೆ ಯಾರ ಸಲಹೆಯ ಮೇರೆಗೆ ಪ್ರಾಸಾ.6 ರವರು  ಕ್ಷ ಕಿರಣ ತೆಗೆಸಿಕೊಂಡು ದಿಃ 05.05.2015 ರಂದು ಮಧ್ಯಾಹ್ನ 3.30 ರ ಸಮಯದಲ್ಲಿ ಹಿರಿಯೂರಿನ ಸರ್ಕಾರಿ ಆಸ್ಪತ್ರೆಗೆ ಹೋಗಿದ್ದರೆನ್ನುವುದನ್ನು, ಯಾರು ಅವರಿಗೆ ಬ್ಯಾಂಡೇಜ್ ಹಾಕಿದ್ದರು ಎನ್ನುವುದನ್ನು ಅವರು ಸ್ಪಷ್ಟವಾಗಿ ವಿವರಿಸಿಲ್ಲ.

25. ಪ್ರಾಸಾ.6 ರವರು ಆರೋಪಿಸಿದಂತೆ ಆರೋಪಿತರಿಂದ ಹಲ್ಲೆಗೊಳಗಾಗಿ ದಿಃ 04.05.2015 ರಂದು ಹಿರಿಯೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೇ ಆದರೆ ಆ ಬಗ್ಗೆ  ದಿಃ 04.05.2015  ರ ಎಂ ಎಲ್ ಸಿ ದಾಖಲೆಗಳಲ್ಲಿ ಏಕೆ ಉಲ್ಲೇಖವಿಲ್ಲ ಹಾಗೂ ದಿಃ 05.05.2015 ರಂದು ಮಧ್ಯಾಹ್ನ 3.30 ರ ಸಮಯದಲ್ಲಿ ವೈಧ್ಯರನ್ನು ಸಂಪರ್ಕಿಸಲು ಕಾರಣವೇನು ಎನ್ನುವುದು ಸಂಶಯಾಸ್ಪದವಾಗಿ ಕಂಡುಬರುತ್ತದೆ.

26. ಪ್ರಾಸಾ.6 ರವರನ್ನು ಆರೋಪಿತರ ಪರ ವಕೀಲರು ಪಾಟೀ ಸವಾಲಿಗೊಳಪಡಿಸಿದಾಗ ಗಲಾಟೆಯಾದಾಗ 20–30 ಜನರಿದ್ದರೆಂದು ಬೆಳಿಗ್ಗೆ 10 ರಿಂದ 11.30 ರವರೆಗೂ ಗಲಾಟೆ ನಡೆಯಿತೆಂದು ತಾನು ಆಸ್ಪತ್ರೆಗೆ 12 ಗಂಟೆ ಸುಮಾರಿಗೆ

ಹೋಗಿದ್ದು ವೈದ್ಯರಿಗೆ ಹೊಡೆದಾಟದ ಬಗ್ಗೆ ಹೇಳಿರುತ್ತೇನೆಂದು ಸಾಕ್ಷಿ ನುಡಿದಿದ್ದಾರೆ. ಆದರೆ, ನಿಪಿ.6 ರ ಗಾಯದ ಪ್ರಮಾಣಪತ್ರದಿಂದ ಹಾಗೂ ವೈಧ್ಯಾಧಿಕಾರಿಯಾದ ಪ್ರಾಸಾ.8 ರ ನುಡಿ ಸಾಕ್ಷ್ಯದಿಂದ ಪ್ರಾಸಾ.6 ರವರು ದಿಃ 04.05.2015 ರಂದು ಹಿರಿಯೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿಲ್ಲವೆಂದು ಸ್ಪಷ್ಟವಾಗಿ ತಿಳಿದು ಬರುತ್ತದೆ. ಇದಲ್ಲದೇ ಸರ್ಕಾರಿ ಆಸ್ಪತ್ರೆಯಲ್ಲಿ ತನ್ನ ಕ್ಷಕಿರಣ ತೆಗೆದಿರುತ್ತಾರೆಂದು ತಾನು ಕ್ಷಕಿರಣವನ್ನು ಪೋಲೀಸರಿಗೆ ಕೊಟ್ಟಿದ್ದೇನೆಂದು ಪ್ರಾಸಾ.6 ರವರು ತಮ್ಮ ಪಾಟೀಸವಾಲಿನಲ್ಲಿ ಹೇಳಿದ್ದು , ನಿಪಿ.3 ರ ದೂರನ್ನು ಸಲ್ಲಿಸುವಾಗ ಪ್ರಾಸಾ.6 ರವರು ಕ್ಷಕಿರಣವನ್ನು ಸಹಾ ಕೊಟ್ಟಿದ್ದರೆಂದು ಈ ಪ್ರಕರಣ ದಾಖಲಿಸಿದ ಪ್ರಾಸಾ.3 ರವರು ಸಾಕ್ಷಿ ನುಡಿದಿಲ್ಲ ಹಾಗೂ ಅಭಿಯೋಜನಾ ಪರವಾಗಿ ಆ ಕ್ಷಕಿರಣವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

27. ಆರೋಪಿತರು ತನಗೆ ಹಲ್ಲೆ ಮಾಡುವಾಗ ಚಾಸಾ.2 ಮತ್ತು 3 ರವರು ಬಂದು ಗಲಾಟೆ ಬಿಡಿಸಿದ್ದಾರೆಂದು ಪ್ರಾಸಾ.6 ರವರು ತಮ್ಮ ದೂರಿನಲ್ಲಿ ಹಾಗೂ ತಮ್ಮ ಮುಖ್ಯ ವಿಚಾರಣೆಯಲ್ಲಿ ಸಾಕ್ಷಿ ನುಡಿದಿದ್ದರೂ ಸಹಾ ಆ ಬಗ್ಗೆ ಪ್ರಾಸಾ 1 ಮತ್ತು 2 ರವರು ಸಾಕ್ಷಿ ನುಡಿದಿಲ್ಲ. ಕೃತ್ಯದ ಪ್ರತ್ಯಕ್ಷದರ್ಶಿಗಳು ಹಾಗೂ ಗಲಾಟೆ ಬಿಡಿಸಿದ ವ್ಯಕ್ತಿಗಳೆಂದು ಹೇಳಲಾದ ಪ್ರಾಸಾ.1 ಮತ್ತು 2 ರವರು ತಾವು ಯಾವುದೇ ಗಲಾಟೆಯನ್ನು ನೋಡಿಲ್ಲವೆಂದು, ಈ ಪ್ರಕಾರಣದ ಬಗ್ಗೆ ತಮಗೆ ಏನೂ ಗೊತ್ತಿಲ್ಲವೆಂದು ನುಡಿದಿದ್ದರಿಂದ

ಇವರಿಬ್ಬರನ್ನು ಸಹಾಯಕ ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿಗಳೆಂದು ಪರಿಗಣಿಸಿ ಪಾಟೀ ಸವಾಲಿಗೆ ಒಳಪಡಿಸಿದಾಗ 1 ನೇ ಆರೋಪಿ ಗಾರೆ ಕೆಲಸ ಮಾಡುವುದಿಲ್ಲವೆಂದು ಚಾಸಾ.1 ರವರ ಜೊತೆ ಜಗಳಮಾಡಿ ಅವರಿಗೆ ಸೂಳೆಮಗನೆ ಬೋಳಿಮಗನೆ ಎಂದು ಅವಾಚ್ಯಶಬ್ದಗಳಿಂದ ಬೈದು, ಕೈ ಯಲ್ಲಿದ್ದ ದೊಣ್ಣೆಯಿಂದ ಅವರ ಎಡಗೈಗೆ, ಬೆನ್ನಿಗೆ ಹೊಡೆದಿದ್ದಾರೆನ್ನುವುದನ್ನು ಉಳಿದ ಆರೋಪಿತರು ಚಾಸಾ.1 ರವರಿಗೆ ಕೈ ಯಿಂದ ಹೊಡೆದು, ಕಾಲಿನಿಂದ ಒದ್ದು ನೋವುಂಟುಪಡಿಸಿ ಎಲ್ಲರೂ ಸೇರಿ ಕೊಲೆ ಬೆದರಿಕೆ ಹಾಕಿದ್ದಾರೆನ್ನುವುದನ್ನು, ಆ ಗಲಾಟೆಯನ್ನು ತಾವು ಬಿಡಿಸಿದ್ದೇವೆನ್ನುವುದನ್ನು ಪ್ರಾಸಾ.1 ಮತ್ತು 2 ರವರು ಸ್ಪಷ್ಟವಾಗಿ ಅಲ್ಲಗಳೆದಿದ್ದಾರೆ.

28. ಪ್ರಸ್ತುತ ಪ್ರಕರಣದಲ್ಲಿ ಘಟನೆಯ ಬಗ್ಗೆ, ಹಲ್ಲೆಯ ಬಗ್ಗೆ ಪ್ರಾಸಾ.6 ರವರ ನುಡಿ ಸಾಕ್ಷ್ಯವನ್ನು ಪುಷ್ಟೀಕರಿಸಿ ಯಾವುದೇ ಸ್ವತಂತ್ರ ಸಾಕ್ಷಿದಾರರು ಸಾಕ್ಷಿ ನುಡಿದಿಲ್ಲ . ಇದಲ್ಲದೇ ಪ್ರಾಸಾ.6 ರವರು ನಿಪಿ.3 ರ ತಮ್ಮ ದೂರಿನಲ್ಲಿ ಗೊಂದಲ ಉಂಟಾಗುವಂತೆ ಆರೋಪ ಮಾಡಿದ್ದು, ಅವರ ಆರೋಪಗಳಿಗೂ ವೈಧ್ಯಕೀಯ ದಾಖಲೆಗಳಿಗೂ ಯಾವುದೇ ಹೊಂದಾಣಿಕೆ ಕಂಡುಬಂದಿರುವುದಿಲ್ಲ. ತಾನು ಪೋಲೀಸರಿಗೆ ದೂರು ನೀಡಿದ ಮಾರನೇಯ ದಿನ ಮಧ್ಯಾಹ್ನ 2 ಗಂಟೆಗೆ ಪೋಲಿಸರು ತಮ್ಮ ಮನೆಯ ಹತ್ತಿರ ಬಂದು ನಿಪಿ.5 ರಂತೆ ಮಹಜರ್ ಜರುಗಿಸಿ ಆರೋಪಿತರು ಹಲ್ಲೆಗೆ ಬಳಸಿದ ಎಂ.ಒ.1 ರ ದೊಣ್ಣೆಯನ್ನು ಅಮಾನತ್ತುಪಡಿಸಿಕೊಂಡಿದ್ದಾರೆಂದು ಪ್ರಾಸಾ.6 ರವರು ಸಾಕ್ಷಿ ನುಡಿ

ದಿದ್ದರೂ ಸಹಾ, ಮಹಜರ್‌ನ ಪಂಚ ಸಾಕ್ಷಿದಾರರೆಂದು ಹೇಳಲಾದ ಪ್ರಾಸಾ.4 ಮತ್ತು 5 ರವರು ತಮ್ಮ ವಿಚಾರಣೆಯಲ್ಲಿ ತಾವು ನಿಪಿ.5 ರ ಮಹಜರಿಗೆ ಠಾಣೆಯಲ್ಲಿ ಸಹಿ ಮಾಡಿದ್ದು , ಪೋಲಿಸರು ತಮ್ಮ ಸಮಕ್ಷಮ ಮಹಜರ್ ಮಾಡಿಲ್ಲವೆಂದು ಏನನ್ನೂ ಜಪ್ತಿ ಮಾಡಿಲ್ಲವೆಂದು ನುಡಿದಿದ್ದರಿಂದ ಇವರಿಬ್ಬರನ್ನು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿ ಸಹಾಯಕ ಸರ್ಕಾರಿ ಅಭಿಯೋಜಕರು ಪಾಟೀ ಸವಾಲಿಗೆ ಒಳಪಡಿಸಿದರೂ ಸಹಾ ನಿಪಿ.5 ರ ಮಹಜರನ್ನು ದಿಃ 05.05.2015 ರಂದು ಚಾಸಾ.1/ಪ್ರಾಸಾ.6 ರ ಮನೆಯ ಮುಂದೆ ಆದ ಗಲಾಟೆಯ ವಿಚಾರದಲ್ಲಿ ಆ ಸ್ಥಳದಲ್ಲಿ ಜರುಗಿಸಿ ಎಂ.ಓ.1ರ ದೊಣ್ಣೆಯನ್ನು ತಮ್ಮ ಸಮಕ್ಷಮ ಅಮಾನತ್ತು ಪಡಿಸಿಕೊಂಡಿದ್ದಾರೆಂಬುದನ್ನು ಇವರಿಬ್ಬರೂ ಸಾಕ್ಷಿದಾರರು ಸ್ಪಷ್ಟವಾಗಿ ಅಲ್ಲಗಳೆದಿದ್ದಾರೆ.

29. ಈ ಪ್ರಕರಣದಲ್ಲಿ ಪ್ರಾಸಾ.6 ರವರ ನುಡಿ ಸಾಕ್ಷ್ಯಕ್ಕೆ ಪೂರಕವಾಗಿ ಆರೋಪಿತರ ವಿರುದ್ದ ಮಾಡಲಾದ ಆರೋಪಗಳ ಬಗ್ಗೆ ಯಾವುದೇ ಸ್ವತಂತ್ರ ಸಾಕ್ಷಿದಾರರು ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಿಲ್ಲ. ನಿಪಿ.5 ರ ಮಹಜರ್ ಮೂಲಕ ಎಂ.ಒ.1 ರ ದೊಣ್ಣೆಯನ್ನು ದೂರು ನೀಡಿದ ಮಾರನೆಯ ದಿನ ಘಟನಾ ಸ್ಥಳದಲ್ಲಿ ಅಮಾನತ್ತುಪಡಿಸಿಕೊಳ್ಳಲಾಗಿದೆ ಎಂದು ಹೇಳಲು ನ್ಯಾಯಾಲಯದ ಮುಂದೆ ಯಾವುದೇ ಪೂರಕ ಸಾಕ್ಷ್ಯಾದಾರಗಳು ಲಭ್ಯವಿಲ್ಲ.

30. ಕೃತ್ಯ ನಡೆದ ದಿನವೇ ತಾನು ಹಿರಿಯೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ದಾಖಲಾಗಿದ್ದೆ ಎಂದು ಅಲ್ಲಿ ವೈದ್ಯರು ಎಕ್ಸರೇ ತೆಗೆದು ನೋಡಿದಾಗ ತನ್ನ ಎಡಗೈ ಮೂಳೆ ಮುರಿದಿದೆ ಎಂದು ತಿಳಿಸಿದರೆಂದು ಪ್ರಾಸಾ.6 ರವರು ಸಾಕ್ಷಿ ನುಡಿದಿದ್ದರೂ ಸಹಾ ಅವರ ನುಡಿ ಸಾಕ್ಷ್ಯವನ್ನು ಪುಷ್ಟೀಕರಿಸಲು ಯಾವುದೇ ವೈಧ್ಯಕೀಯ ದಾಖಲೆಗಳು ಲಭ್ಯವಿಲ್ಲ. ಪ್ರಾಸಾ.8 ರವರಿಗೆ ಪ್ರಾಸಾ.6 ರವರು ತೋರಿಸಿದ ಎಕ್ಸರೆ ಯನ್ನು ಯಾರ ಸಲಹೆಯ ಮೇರೆಗೆ ತೆಗೆಯಲಾಗಿತ್ತು ಎಂದು ಹೇಳಲು ಯಾವುದೇ ಸಾಕ್ಷ್ಯಾದಾರಗಳು ಲಭ್ಯವಿಲ್ಲ. ಏಕೆಂದರೆ ಪ್ರಾಸಾ.6 ರವರು ಹೇಳುವಂತೆ ಅವರು ಹಿರಿಯೂರಿನ ಸರ್ಕಾರಿ ಅಸ್ಪತ್ರೆಯಲ್ಲಿ ತೆಗೆದ ಕ್ಷಕಿರಣವನ್ನು ಪೋಲಿಸರಿಗೆ ಕೊಟ್ಟಿದ್ದೇ ಆದರೆ ಪ್ರಾಸಾ.8 ರವರು ಹಾಜರು ಪಡಿಸಿದ ಕ್ಷ ಕಿರಣವನ್ನು ಯಾವಾಗ ತೆಗೆಸಲಾಗಿತ್ತು ಎನ್ನುವ ಪ್ರಶ್ನೆ ಉದ್ಭವಿಸುತ್ತದೆ.

31. ಪ್ರಾಸಾ.8 ರವರು ಹಾಜರು ಪಡಿಸಿದ ನಿಪಿ.7 ರ ಕ್ಷಕಿರಣದಲ್ಲಿ ಎಡಗೈನ ಅಲ್ನಾ ಮೂಳೆ ಮುರಿದಿರುವುದು ಕಂಡು ಬಂದರೂ ಸಹಾ ಆ ಮೂಳೆ ಮುರಿತವು ದಿನಾಂಕಃ 04.05.2015 ರಂದು ಆಗಿದೆ ಎಂದು ಹೇಳಲು ಯಾವುದೇ ಸಾಕ್ಷ್ಯಾದಾರಗಳು ಲಭ್ಯವಿಲ್ಲ. ಏಕೆಂದರೆ ನಿಪಿ.6 ರ ಗಾಯದ ಪ್ರಮಾಣಪತ್ರದಲ್ಲಿ ಸಹಾ ಗಾಯದ ವಯಸ್ಸನ್ನು ನಮೂದು ಮಾಡಿಲ್ಲ. ನಿಪಿ.6 ರವರ ಗಾಯದ ಪ್ರಮಾಣಪತ್ರ ಹಾಗೂ ನಿಪಿ.7 ರ ಕ್ಷಕಿರಣದಿಂದ ಪ್ರಾಸಾ.6 ರವರ ಎಡಗೈನ ಮೂಳೆ ಮುರಿದಿತ್ತು ಎಂದು ಕಂಡುಬಂದರೂ

ಸಹಾ ಆ ಮೂಳೆ ಮುರಿತಕ್ಕೆ ಆರೋಪಿತರೇ ಕಾರಣೀಕರ್ತರು ಎಂದು ಹೇಳಲಾಗುವುದಿಲ್ಲ .

32. ಈ ಪ್ರಕರಣದಲ್ಲಿ ಸಾಕ್ಷಿ ನುಡಿದ ಪ್ರಾಸಾ.3 ಹಾಗೂ ಪ್ರಾಸಾ.7 ರವರು ತಾವು ಜರುಗಿಸಿದ ತನಿಖೆಯ ಬಗ್ಗೆ ಮಾತ್ರ ಸಾಕ್ಷಿ ನುಡಿದಿದ್ದು ಇವರ ನುಡಿ ಸಾಕ್ಷ್ಯವನ್ನು ಪುಷ್ಟೀಕರಿಸಿ ಯಾವುದೇ ಸ್ವತಂತ್ರ ಸಾಕ್ಷಿದಾರರು ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಿಲ್ಲ . ಆರೋಪಿತರ ವಿರುದ್ದ ಪ್ರಾಸಾ.6 ರವರು ಸಾಕ್ಷಿ ನುಡಿದಿದ್ದರೂ ಸಹಾ ಅವರ ನುಡಿ ಸಾಕ್ಷ್ಯವನ್ನು ನಂಬಲರ್ಹ ಸಾಕ್ಷ್ಯಾಧಾರಗಳು ನ್ಯಾಯಾಲಯದ ಮುಂದೆ ಲಭ್ಯವಿಲ್ಲ . ಆ ಕಾರಣದಿಂದ ಕೇವಲ ಪ್ರಾಸಾ.6 ರವರ ನುಡಿ ಸಾಕ್ಷ್ಯವನ್ನು ನಂಬಲು ಸಾಧ್ಯವಿಲ್ಲ . ಕೇವಲ ಪ್ರಾಸಾ.6ರವರ ನುಡಿ ಸಾಕ್ಷ್ಯದಿಂದ ಆರೋಪಿತರ ವಿರುದ್ಧ ಮಾಡಲಾದ ಆರೋಪಗಳು ಸಾಬೀತಾಗುವುದಿಲ್ಲ. ಈ ಎಲ್ಲಾ ಕಾರಣಗಳಿಂದ ಅಭಿಯೋಜನಾ ಪಕ್ಷದವರು ಆರೋಪಿತರ ವಿರುದ್ದ ಮಾಡಿರುವ ಆರೋಪಗಳನ್ನು ಸಾಬೀತುಪಡಿಸಲು ಸಂಪೂರ್ಣವಾಗಿ ವಿಫಲರಾಗಿರುವುದರಿಂದ ಅಂಶ.1 ರಿಂದ 4 ನ್ನು ನಾನು ನಕಾರಾತ್ಮಕವಾಗಿ ಉತ್ತರಿಸುತ್ತೇನೆ.

**ಅಂಶ 5**ಃ ಈ ಮೇಲ್ಕಂಡಂತೆ ಚರ್ಚಿಸಿ ಬಂದ ನಿರ್ಣಯದಂತೆ ಈ ಕೆಳಕಂಡಂತೆ ಆದೇಶಿಸುತ್ತೇನೆ.

## ಆ ದೇ ಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ 248[1] ರ ರೀತ್ಯಾ 1 ರಿಂದ 4 ನೇ ಆರೋಪಿತರ ವಿರುದ್ದ ಮಾಡಲಾದ ಭಾರತೀಯ ದಂ ಸಂ ಕಲಂ 323, 326, 504, 506 ಸಹವಾಚಕ 34 ರ ಆರೋಪಗಳು ಸಾಬೀತಾಗದ ಕಾರಣ ಆರೋಪಿತರನ್ನು ದೋಷಮುಕ್ತರನ್ನಾಗಿ ಪರಿಗಣಿಸಿ ಬಿಡುಗಡೆಗೊಳಿಸಲಾಗಿದೆ.

ಆರೋಪಿತರು ಬರೆದುಕೊಟ್ಟ ಜಾಮೀನು ಮುಚ್ಚಳಿಕೆಯನ್ನು ರದ್ದುಗೊಳಿಸಲಾಗಿದೆ.

ಮಾಲುಪಟ್ಟಿ ಸಂ 70/2015 ರಂತೆ ಅಮಾನತ್ತುಪಡಿಸಿಕೊಳ್ಳಲಾದ ಎಂ.ಓ.1 ರ ದೊಣ್ಣೆಯನ್ನು ಅಪೀಲು ಸಮಯ ಮುಗಿದ ನಂತರ ನಾಶಗೊಳಿಸಲು ಆದೇಶಿಸಲಾಗಿದೆ.

[ಮೇಲಿನ ತೀರ್ಪನ್ನು ಶೀಘ್ರಲಿಪಿಗಾರರರಿಂದ ಕಂಪ್ಯೂಟರ್ ಮೂಲಕ ಬೆರಳಚ್ಚು ಮಾಡಿಸಿ, ನನ್ನಿಂದ ಸೂಕ್ತವಾಗಿ ತಿದ್ದುಪಡಿ ಮಾಡಿ ನಂತರ, ಮುಕ್ತ ನ್ಯಾಯಾಲಯದಲ್ಲಿ ತೀರ್ಪನ್ನು ದಿನಾಂಕ: 28.6.2019 ರಂದು ಘೋಷಿಸಲಾಯಿತು]

**[ಶ್ರೀಮತಿ.ತಟ್ಟಂಡ ದಮಯಂತಿ ಸೋಮಯ್ಯ]**
**ಹಿರಿಯ ಶ್ರೇಣೀಯ ಸಿವಿಲ್ ನ್ಯಾಯಾಧೀಶರು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ಹಿರಿಯೂರು.**

## ಅ ನು ಬಂ ಧ

**ಅಭಿಯೋಜನೆಯ ಪರ ವಿಚಾರಣೆಗೊಳಪಟ್ಟ ಸಾಕ್ಷಿದಾರರುಃ**

| | | |
|---|---|---|
| ಪ್ರಾಸಾ 1 | ಃ | ಸಿದ್ದಣ್ಣ |
| ಪ್ರಾಸಾ 2 | ಃ | ಶೇಖುಲ್ಲಾ |
| ಪ್ರಾಸಾ 3 | ಃ | ಲಕ್ಷ್ಮಿವೆಂಕಟೇಶ್ |
| ಪ್ರಾಸಾ 4 | ಃ | ಸರ್ದಾರ್ |
| ಪ್ರಾಸಾ 5 | ಃ | ಬರಕತ್ ಅಲಿ |
| ಪ್ರಾಸಾ 6 | ಃ | ಅಜ್ಮತುಲ್ಲಾ |
| ಪ್ರಾಸಾ 7 | ಃ | ಯು. ಸತೀಶ್ ಕುಮಾರ್ |
| ಪ್ರಾಸಾ 8 | ಃ | ಡಾ. ಗೀತಾ |

**ಅಭಿಯೋಜನೆಯ ಪರ ಗುರುತಿಸಲ್ಪಟ್ಟ ದಾಖಲೆಗಳುಃ**

| | | |
|---|---|---|
| ನಿಪಿ 1 | ಃ | ಪ್ರಾಸಾ.1 ರವರ ಹೇಳಿಕೆ |
| ನಿಪಿ 1(ಎ) | ಃ | ಪ್ರಾಸಾ.3 ರವರ ಸಹಿ |
| ನಿಪಿ 2 | ಃ | ಪ್ರಾಸಾ.2 ರವರ ಹೇಳಿಕೆ |
| ನಿಪಿ 2(ಎ) | ಃ | ಪ್ರಾಸಾ.3 ರವರ ಸಹಿ |
| ನಿಪಿ 3 | ಃ | ದೂರು |
| ನಿಪಿ 3(ಎ) | ಃ | ಪ್ರಾಸಾ.3 ರವರ ಸಹಿ |
| ನಿಪಿ 3(ಬಿ) | ಃ | ಪ್ರಾಸಾ.6 ರವರ ಸಹಿ |
| ನಿಪಿ 4 | ಃ | ಪ್ರ. ವ. ವ |
| ನಿಪಿ 4(ಎ) | ಃ | ಪ್ರಾಸಾ.3 ರವರ ಸಹಿ |
| ನಿಪಿ 5 | ಃ | ಸ್ಥಳ ಪಂಚನಾಮೆ |
| ನಿಪಿ 5(ಎ) | ಃ | ಪ್ರಾಸಾ.3 ರವರ ಸಹಿ |
| ನಿಪಿ 5(ಬಿ) | ಃ | ಪ್ರಾಸಾ.4 ರವರ ಸಹಿ |
| ನಿಪಿ 5(ಸಿ) | ಃ | ಪ್ರಾಸಾ.5 ರವರ ಸಹಿ |
| ನಿಪಿ 5(ಡಿ) | ಃ | ಪ್ರಾಸಾ.6 ರವರ ಸಹಿ |
| ನಿಪಿ 6 | ಃ | ಗಾಯದ ಪ್ರಮಾಣ ಪತ್ರ |
| ನಿಪಿ 6(ಎ) | ಃ | ಪ್ರಾಸಾ.7 ರವರ ಸಹಿ |

ನಿಪಿ 6(ಬಿ) : ಪ್ರಾಸಾ.8 ರವರ ಸಹಿ
ನಿಪಿ 7 : ಕ್ಷಕಿರಣ

**ಆರೋಪಿತರ ಪರ ವಿಚಾರಣೆಗೊಳಪಟ್ಟ ಸಾಕ್ಷಿದಾರರುಃ**

ಇಲ್ಲ

**ಆರೋಪಿತರ ಪರ ಗುರುತಿಸಲ್ಪಟ್ಟ ದಾಖಲಾತಿಗಳುಃ**

ಇಲ್ಲ

**ಗುರುತು ಹಾಕಲ್ಪಟ್ಟ ಮುದ್ದೆ ಮಾಲುಗಳ ಪಟ್ಟಿಃ**

ಎಂ.ಒ.1 : ದೊಣ್ಣೆ

**[ಶ್ರೀಮತಿ.ತಟ್ಟಂಡ ದಮಯಂತಿ ಸೋಮಯ್ಯ]**
**ಹಿರಿಯ ಶ್ರೇಣೀಯ ಸಿವಿಲ್ ನ್ಯಾಯಾಧೀಶರು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ಹಿರಿಯೂರು.**